# POLICE PUBLIC SCHOOL

(Managed by PPS(CBSE) TRUST)
Koramangala, Bengaluru-560034, Karnataka
Email: ppsk.bssc@gmail.com
Website: www.policepublicschoolksrpblr.org
Telephone No: 080-25506765,
6362598124

## VIBES JULY - 2025

### ಪಿಪಿಎಸ್, ಗೋಲ್ಡ್ ಝೋನ್ ಪ್ರಶಸ್ತಿಗೆ ಆಯ್ಕೆ.










ಪೊಲೀಸ್ ಪಬ್ಲಿಕ್ ಸ್ಕೂಲ್ ಬೆಂಗಳೂರು 2024–25ನೇ ಸಾಲಿನ ದೃಷ್ಟಿ ಹೀನ ವ್ಯಕ್ತಿಗಳ ಸಬಲೀಕರಣಕ್ಕೆ ನೀಡಿದ ವಿಶಿಷ್ಟ ಸೇವೆಗಾಗಿ ಮದುರೈನಲ್ಲಿರುವ ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ **(IAB)** ಸಂಸ್ಥೆಯಿಂದ ನೀಡುವ "ಗೋಲ್ಡ್ ಝೋನ್" ಪ್ರಶಸ್ತಿಯನ್ನು ಪಡೆದುಕೊಂಡಿದೆ. ಈ ಪ್ರಶಸ್ತಿಯು ಸಾಮಾಜಿಕ ಜವಾಬ್ದಾರಿ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಗೆ ನೀಡಿದ ವಿಶೇಷ ಕೊಡುಗೆಗಾಗಿ ಈ ಪುರಸ್ಕಾರ ದೊರೆತಿದೆ. ಇದು ಶಾಲೆಯ ಸಮಾಜಮುಖಿ ಕಾಳಜಿಯನ್ನು ತೋರಿಸುತ್ತದೆ. ಈ ಸಾಧನೆಯ ಹಿಂದೆ ಶಾಲೆಯ ವಿದ್ಯಾರ್ಥಿಗಳು ಶಿಕ್ಷಕರು ಮತ್ತು ಸಿಬ್ಬಂದಿಯ ಪಾತ್ರ ಪ್ರಮುಖವಾಗಿದೆ.

### ತೋಟಗಾರಿಕ ವೃತ್ತಿಪರತೆಯ ಬಗ್ಗೆ ಕಾರ್ಯಾಗಾರ







ವಿದ್ಯಾರ್ಥಿಗಳ ಮನೋವಿಕಾಸಗೊಳ್ಳಲು ಹಾಗೂ ಭವಿಷ್ಯದಲ್ಲಿ ಸ್ಪಷ್ಟ ಗುರಿ ಹೊಂದಲು ಸಹಾಯವಾಗಲೆಂದು ಒಂಬತ್ತನೇ ತರಗತಿಯಿಂದ ಹನ್ನೆರಡನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ 2ನೇ ಅವಧಿಗೆ "ವೃತ್ತಿಪರ ಮಾಹಿತಿ" ಎಂಬ ಶೀರ್ಷಿಕೆಯ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಜುಲೈ 5, ಶನಿವಾರ ಶಾಲೆಯಲ್ಲಿ ಆಯೋಜಿಸಲಾಗಿತ್ತು ಆಂಗ್ಲ ಭಾಷಾ ಶಿಕ್ಷಕರಾದ ಶ್ರೀ ಜೋ ವ್ಯಾಲೀಸ್ ರವರು ಸ್ವಾಗತ ಭಾಷಣದೊಂದಿಗೆ ಕಾರ್ಯಕ್ರಮವು ಆರಂಭಗೊಂಡಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಕೆ.ಎಂ.ಪರಶಿವಮೂರ್ತಿ, ಶ್ರೀಮತಿ ಲಲಿತಾ ಮತ್ತು ಶ್ರೀಮತಿ ರಾಜೇಶ್ವರಿ ಅವರು ಭಾಗವಹಿಸಿದರು, ತೋಟಗಾರಿಕೆ ಇಲಾಖೆಯಿಂದ ಬಂದಿದ್ದ ಸಂಪನ್ಮೂಲ ವ್ಯಕ್ತಿಗಳು ತೋಟಗಾರಿಕೆಯಲ್ಲಿನ ವೃತ್ತಿ ಮಾರ್ಗದರ್ಶನ ನೀಡಿದರು.

ವಿದ್ಯಾರ್ಥಿಗಳು ಕೌಶಲ್ಯಾಧಾರಿತ ವೃತ್ತಿಗಳನ್ನು ಆರಿಸಿಕೊಳ್ಳಲು ಅವರಿಗೆ ಸೂಕ್ತ ಮಾಹಿತಿಯನ್ನು ಒದಗಿಸಲಾಯಿತು. ಅಲ್ಲದೇ ತಮ್ಮ ಇಲಾಖೆಯ ವಿವಿಧ ಉಪಯುಕ್ತ ಅವಕಾಶಗಳ ಬಗ್ಗೆ ಹಾಗೂ ಉದ್ಯೋಗಾವಕಾಶಗಳು ಮತ್ತು ಅವುಗಳಿಗೆ ಅಗತ್ಯವಿರುವ ವಿದ್ಯಾರ್ಹತೆಯ ಕುರಿತು ವಿವರವಾಗಿ ವಿವರಿಸಿದರು, ಕೃಷಿ ಹಾಗೂ ತೋಟಗಾರಿಕೆಯಲ್ಲಿ ವಿಶೇಷ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ಇದು ಬಹಳ ಉಪಯುಕ್ತವಾಗಿತ್ತು. ಕಾರ್ಯಕ್ರಮದ ಅಂತ್ಯದಲ್ಲಿ ಗಣಿತ ಶಿಕ್ಷಕರಾದ ಶ್ರೀಮತಿ ರಂಜಿತಾ, ರವರು ವಂದನಾರ್ಪಣೆ ನಡೆಸಿಕೊಟ್ಟರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿತು.

## ಗುರು ಪೂರ್ಣಿಮಾ ವಿಶೇಷ ಅಸೆಂಬ್ಲಿ





ಗುರು ಪೂರ್ಣಿಮೆಯ ಅಂಗವಾಗಿ ಶಾಲೆಯಲ್ಲಿ ವಿಶೇಷ ಅಸೆಂಬ್ಲಿಯನ್ನು ಜುಲೈ 10, ರಂದು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ತಾವೇ ಸ್ವಂತ ತಯಾರಿಸಿದ ಹೂವುಗಳನ್ನು ಗುರುಗಳಿಗೆ ನೀಡಿದರು. ವಿದ್ಯಾರ್ಥಿಗಳು ಗುರು-ಶಿಷ್ಯರ ಬಾಂಧವ್ಯವನ್ನು ಪ್ರತಿಬಿಂಬಿಸುವ ನೃತ್ಯ ಪ್ರದರ್ಶನ ಮಾಡಿದರು, ಪ್ರಾಚಾರ್ಯರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಸದಾ ತಮ್ಮ ಶಿಕ್ಷಕರಿಗೆ ಪ್ರೀತಿ ಮತ್ತು ಗೌರವವನ್ನು ನೀಡಬೇಕು ಮತ್ತು ಅವರ ಮೌಲ್ಯವನ್ನು ಅರ್ಥಮಾಡಿಕೊಳ್ಳಬೇಕು ಎಂದು ಪ್ರೋತ್ಸಾಹಿಸಿದರು.

## ನೀಲಿ ಬಣ್ಣದ ದಿನದ ಆಚರಣೆ








ಜುಲೈ 11, ರಂದು ಪೂರ್ವ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ನೀಲಿ ಬಣ್ಣದ ದಿನವನ್ನು ಅತ್ಯಂತ ಉತ್ಸಾಹದಿಂದ ಆಚರಿಸಿದರು, ವಿದ್ಯಾರ್ಥಿಗಳು ನೀಲಿ ಬಣ್ಣದ ಬಟ್ಟೆ ತೊಟ್ಟು ಮೋಡಗಳು, ಬ್ಲೂಬೇರಿ, ನೀರಿನ ಹನಿಗಳ ಪ್ರದರ್ಶನ ಮಾಡಿದರು, ತರಗತಿಗಳು ನೀಲಿ ಬಣ್ಣದ ಅಲಂಕಾರ, ಆಟಿಕೆ, ಪ್ರದರ್ಶನಗಳಿಂದ ಕಂಗೊಳಿಸಿದವು, ಶಿಕ್ಷಕರು ವಿದ್ಯಾರ್ಥಿಗಳಿಗೆ ನೀಲಿ ಬಣ್ಣ ಬಿಂಬಿಸುವ ಪಾಠಗಳು, ಹಾಡುಗಳು, ಕ್ರಿಯಾತ್ಮಕ ಚಟುವಟಿಕೆಗಳು ಹೂದಾನಿಗಳ ತಯಾರಿಕೆ ವಿವಿಧ ಆಕೃತಿಗಳನ್ನು ನೀಲಿ ಬಣ್ಣದಿಂದ ತಯಾರಿಸಿದರು.

ನರ್ಸರಿ ಮಕ್ಕಳು ಮೀನಿನ ಆಕೃತಿಯ ಚಿತ್ರಗಳನ್ನು ಪೇಪರ್ ಪ್ಲೇಟ್‌ನಲ್ಲಿ ತಯಾರಿಸಿದರು.

ಎಲ್‌ಕೆಜಿ ಮಕ್ಕಳು ತಿಮಿಂಗಲದ ಮೇಲೆ ಸ್ಪಾಂಜ್ ಪೇಟಿಂಗ್ ಮಾಡಿದರು.

ಯುಕೆಜಿ ಮಕ್ಕಳು ಹತ್ತಿ ಮತ್ತು ಕಾಗದದಿಂದ ನೀಲಿ ಆಕಾಶ ದೃಶ್ಯವನ್ನು ರಚಿಸಿದರು ಈ ಕಾರ್ಯಕ್ರಮ ಮಕ್ಕಳಿಗೆ ನೀಲಿ ಬಣ್ಣದ ವಿಷಯಗಳ ಕಲಿಕೆಗೆ ಸಹಾಯ ಮಾಡಿತು.

## ವಿಶ್ವ ಜನಸಂಖ್ಯಾ ದಿನಾಚರಣೆ.






ಜುಲೈ 11, ರಂದು ವಿಶ್ವ ಜನಸಂಖ್ಯೆ ದಿನವನ್ನು ಶಾಲೆಯಲ್ಲಿ ಆಚರಿಸಲಾಯಿತು, ಆಹಾರ ಮತ್ತು ಸಾರಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಜಾಗೃತಿ ಗೀತೆಯನ್ನು ಹಾಡಿದರು, ಇದು ಜನ ಸಂಖ್ಯೆ ಅಭಿವೃದ್ಧಿ, ರಸ್ತೆ ಮತ್ತು ಸಂಚಾರ ಸಮಸ್ಯೆಗಳನ್ನು ಹೇಗೆ ಹೆಚ್ಚಿಸುತ್ತದೆ ಎಂಬುದನ್ನು ಅರಿವು ಮೂಡಿಸಿತು.

ವಿದ್ಯಾರ್ಥಿಗಳು ಕಿರುನಾಟಕವೊಂದನ್ನು ಪ್ರದರ್ಶಿಸಿದರು. ಅತಿಯಾದ ಜನಸಂಖ್ಯೆಯು ಪರಿಸರ ಹಾಗೂ ದೈನಂದಿನ ಜೀವನದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದುದರ ಕುರಿತು ಜಾಗೃತಿ ಮೂಡಿಸಲಾಯಿತು, ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಜನಸಂಖ್ಯೆ ನಿಯಂತ್ರಣ ಮತ್ತು ಪರಿಸರ ಸುಸ್ಥಿರತೆ ಕುರಿತಾಗಿ ಉತ್ತೇಜನ ನೀಡಿತು, ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಜನಸಂಖ್ಯೆ ಮತ್ತು ಸಂಪತ್ತಿನ ಸಮತೋಲನದ ಕುರಿತು ಆಳವಾದ ಚಿಂತನೆಗೆ ಕಾರಣವಾಯಿತು.

## ಶಿಕ್ಷಕರ ತರಬೇತಿ ಕಾರ್ಯಗಾರ



ಜುಲೈ 12, ರಂದು ಗುರುಕುಲ ಮಾಂಟೇಸರಿ ಶಾಲೆ – ಅವನಹಳ್ಳಿ ಯಲ್ಲಿ " ಮೌಲ್ಯಮಾಪನ" ಕುರಿತು ಕಾರ್ಯಾಗಾರ ಆಯೋಜಿಸಲಾಯಿತು, ಈ ಕಾರ್ಯಾಗಾರದಲ್ಲಿ ಶ್ರೀಮತಿ ಎಂ.ಎಸ್.ವಸುಧಾ ಮತ್ತು ಶ್ರೀಮತಿ ಶಾಜ್ಮಾ ಅವರು ವಿದ್ಯಾರ್ಥಿಗಳಿಗೆ ರಚನಾತ್ಮಕ ಉತ್ತರಗಳನ್ನು ಬರೆಯುವುದು ಮತ್ತು ಶಿಕ್ಷಕರಿಗೆ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ವಿಧಾನಗಳ ಕುರಿತು ಉಪಯುಕ್ತ ಮಾಹಿತಿ ನೀಡಿದರು.

ಈ ಕಾರ್ಯಾಗಾರದಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಸರಳವಾಗಿ ಉತ್ತರಗಳನ್ನು ಬರೆಯುವ ವಿಧಾನ ಮತ್ತು ಉತ್ತರ ಪತ್ರಿಕೆಗಳನ್ನು ನಿಖರವಾಗಿ ಮೌಲ್ಯಮಾಪನ ಮಾಡುವ ಕುರಿತು ಶಿಕ್ಷಕರಿಗೆ ಉಪಯುಕ್ತವಾದ ತಿಳುವಳಿಕೆಯನ್ನು ನೀಡಲಾಯಿತು, ನಮ್ಮ ಶಾಲೆಯ ಹಿಂದಿ ಶಿಕ್ಷಕಿಯಾದ ಶ್ರೀಮತಿ ಪದ್ಮಾವತಿ.ಕೆ.ಪಿ, ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## ಸಿಬಿಎಸ್ಇ ಕಾರ್ಯಾಗಾರ – "ಜೀವನದ ಕೌಶಲ್ಯಗಳು"






ಜುಲೈ 12, ರಂದು ಶಾಲೆಯಲ್ಲಿ ಸಿಬಿಎಸ್ಇ ವತಿಯಿಂದ ಜೀವನ ಕೌಶಲ್ಯಗಳ ಕುರಿತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು, ಈ ಕಾರ್ಯಾಗಾರವನ್ನು ಶ್ರೀಮತಿ ನಂದಿನಿ ಭಟ್ ಮತ್ತು ಶ್ರೀಮತಿ ಸುಧಾ ಪರಮೇಶ್ವರನ್ ಇವರ ನೇತೃತ್ವದಲ್ಲಿ ನಡೆಸಲಾಯಿತು. ಈ ಕಾರ್ಯಾಗಾರದ ಮುಖ್ಯ ಉದ್ದೇಶ ಮಕ್ಕಳಲ್ಲಿ ಜೀವನ ಕೌಶಲ್ಯಗಳು ಹಾಗೂ ಮಾನಸಿಕ ಆರೋಗ್ಯದ ಅರಿವು ಮೂಡಿಸುವುದು ಹಾಗೂ ಜ್ಞಾನ ಸಮಸ್ಯೆಯ ಪರಿಹಾರದ ಕುರಿತು ಆತ್ಮವಿಶ್ವಾಸ ಜವಾಬ್ದಾರಿ, ಸಂವೇದನೆ, ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯ, ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸುವುದಾಗಿತ್ತು, ಈ ಕಾರ್ಯಾಗಾರದಲ್ಲಿ ಗುಂಪು ಚರ್ಚೆ, ಕಿರುನಾಟಕ, ಅಭಿನಯ, ಮಾದರಿಗಳ ತಯಾರಿಕೆಯಂತಹ ಚಟುವಟಿಕೆಗಳಲ್ಲಿ ತೊಡಗಿದರು ಹಾಗೂ ಪ್ರಮುಖ 5 ಜೀವನದ ಕೌಶಲ್ಯಗಳ ಕುರಿತು ಚರ್ಚಿಸಿದರು ಈ ಕಾರ್ಯಾಗಾರ ಶಿಕ್ಷಕರಿಗೆ ಉಪಯುಕ್ತವಾದ ಮಾಹಿತಿಯನ್ನು ಒದಗಿಸಿತು, ಒಟ್ಟಿನಲ್ಲಿ ಈ ಕಾರ್ಯಾಗಾರವು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ನೆರವಾಗುವ ಅಂಶಗಳನ್ನು ಶಿಕ್ಷಕರಿಗೆ ನೀಡಿತು.

## ಅಧ್ಯಕ್ಷರು ಪಿಪಿಎಸ್ ರವರ ಭೇಟಿ







ಜುಲೈ 16 ರಂದು ಶ್ರೀ ಉಮೇಶ್ ಕುಮಾರ್, ಐಪಿಎಸ್, ಎಡಿಜಿಪಿ, ಕೆಎಸ್ಆರ್‌ಪಿ ಮತ್ತು ಅಧ್ಯಕ್ಷರು, ಶ್ರೀ ಸಂದೀಪ್ ಪಾಟೀಲ್, ಐಪಿಎಸ್, ಐಜಿಪಿ, ಕೆಎಸ್ಆರ್‌ಪಿ, ಉಪಾಧ್ಯಕ್ಷರು, ಮತ್ತು ಶ್ರೀ ಬಸವರಾಜ್ ಜಿಳ್ಳೆ, ಡಿಐಜಿಪಿ, ಕೆಎಸ್ಆರ್‌ಪಿ, ಕಾರ್ಯದರ್ಶಿ, ಶಾಲೆಗೆ ಭೇಟಿ ನೀಡಿದರು.

ಅವರು ತಮ್ಮ ಭೇಟಿಯ ಸಮಯದಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು, ಅವರು ವಿದ್ಯಾರ್ಥಿಗಳನ್ನು ತಮ್ಮ ವಿದ್ಯಾಭ್ಯಾಸದ ಪ್ರಗತಿ ಕುರಿತು ಸ್ವತಃ ವಿದ್ಯಾರ್ಥಿಗಳೆ ಆತ್ಮಪರಿಶೀಲನೆ ಮಾಡಿಕೊಳ್ಳಬೇಕೆಂದು ತಿಳಿಸಿದರು, ಮತ್ತು ವಿದ್ಯಾರ್ಥಿಗಳಿಗೆ ಪಠ್ಯಗಳ ಕುರಿತು ವಿಶೇಷ ಆಸಕ್ತಿಯನ್ನು ಬೆಳಸಿಕೊಳ್ಳಬೇಕೆಂದು ಹೇಳಿದರು, ವಿಚಾರಿಸಿದರು ಹಾಗೂ ಅವರ ಶಾಲೆಯ ಉತ್ತಮ ಶೈಕ್ಷಣಿಕ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು, ಅವರ ಪ್ರೇರಣಾದಾಯಕ ಮಾತುಗಳು ವಿದ್ಯಾರ್ಥಿಗಳ ಮೇಲೆ ಶಾಶ್ವತವಾದ ಪರಿಣಾಮ ಬೀರಿದವು, ಶಾಲೆಗೆ ಅವರ ಭೇಟಿ ಮತ್ತು ಉಪಯುಕ್ತ ಸಂವಾದಕ್ಕಾಗಿ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಯಾವತ್ತು ಆಭಾರಿಯಾಗಿರುತ್ತಾರೆ.

## 17 ವರ್ಷದೊಳಗಿನವರ ಕಬಡ್ಡಿ ತಂಡಗಳ ಸಾಧನೆ –ಇಂಡಿಪೆಂಡೆನ್ಸ್ ಕಪ್






ಜುಲೈ 16, ರಂದು ದೆಹಲಿ ಪಬ್ಲಿಕ್ ಶಾಲೆ ಬೆಂಗಳೂರು ಪೂರ್ವದವರು ಆಯೋಜಿಸಲಾದ, "ಸ್ವಾತಂತ್ರ್ಯ ದಿನದ ಕಬಡ್ಡಿ ಕಪ್" ನಲ್ಲಿ ನಮ್ಮ ಶಾಲೆಯ ಅಂಡರ್–17 ಬಾಲಕಿಯರ ಹಾಗೂ ಬಾಲಕರ ತಂಡಗಳು ಭಾಗವಹಿಸಿದವು, ತಂಡಗಳು ಕ್ರೀಡಾ ಸ್ಪೂರ್ತಿಯನ್ನು ಪ್ರದರ್ಶಿಸಿದರು, ನಮ್ಮ ಆಟಗಾರರು ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದು ಬಹಳ ಸಂತೋಷದ ವಿಷಯ ಹಾಗೂ ಆಯ್ಕೆಯಾದ ಆಟಗಾರರಿಗೂ ಮತ್ತು ದೈಹಿಕ ಶಿಕ್ಷಕರಿಗೆ ಹೃತ್ಪೂರ್ವಕ ಅಭಿನಂದನೆಗಳೊಂದಿಗೆ ಮುಂದಿನ ಪಂದ್ಯಗಳಿಗೆ ಶುಭಾಶಯಗಳು.

## ಅಖಿಲ ಭಾರತೀಯ ಚಿತ್ರಕಲೆ ಮತ್ತು ಪ್ರಭಂಧ ಸ್ಪರ್ಧೆ











ಶಾಲೆಯಲ್ಲಿ ಜುಲೈ 16, ರಿಂದ 18, ವರೆಗೆ ಅಖಿಲ ಭಾರತೀಯ ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು ವಿವಿಧ ತರಗತಿಗಳ ವಿದ್ಯಾರ್ಥಿಗಳು ತಮ್ಮ ಸೃಜನಶೀಲತೆ, ಕಲ್ಪನೆ ಹಾಗೂ ಬರವಣಿಗೆ ಕೌಶಲ್ಯಗಳನ್ನು ತೋರಿದರು ಪಾಲ್ಗೊಂಡ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ, ಮತ್ತು ಫಲಿತಾಂಶಕ್ಕಾಗಿ ಕಾತುರದಿಂದ ಕಾಯುತ್ತಿದ್ದೇವೆ.

## STEM ವಿಜ್ಞಾನ ಚಟುವಟಿಕೆ  ಕ್ಯೂರಿಯಾಸಿಟಿ ಅಡ್ಡಾ




ಜುಲೈ 18, ರಂದು "ಕ್ಯೂರಿಯಾಸಿಟಿ ಅಡ್ಡಾ" ದಲ್ಲಿ **STEM** ವಿಜ್ಞಾನ ಪ್ರಯೋಗಾಲಯ ಚಟುವಟಿಕೆ ಮತ್ತು ಛಾಯಾಚಿತ್ರ ಸೆಷನ್ ನಡೆಯಿತು, ವಿದ್ಯಾರ್ಥಿಗಳು ಹೊಸ ವೈಜ್ಞಾನಿಕ ಮಾದರಿಗಳನ್ನು ಉತ್ಸಾಹದಿಂದ ಪ್ರಸ್ತುತ ಪಡಿಸಿದರು ಮತ್ತು ವಿಭಿನ್ನ ವೈಜ್ಞಾನಿಕ ತತ್ವಗಳನ್ನು ಸ್ಪಷ್ಟವಾಗಿ ವಿವರಿಸಿದರು, ಈ ಚಟುವಟಿಕೆ ವಿದ್ಯಾರ್ಥಿಗಳ ಕ್ರಿಯಾತ್ಮಕತೆ, ವೈಜ್ಞಾನಿಕ ತಿಳುವಳಿಕೆ ಮತ್ತು ಆತ್ಮವಿಶ್ವಾಸವನ್ನು ಬೆಳಸಿತು, ಈ ಸಂದರ್ಭಗಳು ಕುತೂಹಲ, ಸಹಕಾರ ಮತ್ತು ಅನುಭವಾತ್ಮಕ ಕಲಿಕೆಗೆ ಪ್ರೇರಣೆ ನೀಡಿತು ಒಟ್ಟಾರೆ ಈ ಕಾರ್ಯಕ್ರಮವು **STEM** ಶಿಕ್ಷಣದ ಪ್ರಚಾರಕ್ಕೆ ಸಹಕಾರಿಯಾಗಿ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆಸಕ್ತಿಯನ್ನು ಹುಟ್ಟಿಸಿತು.

## ಸಿಬಿಎಸ್ಇ ಪ್ರಾಂಶುಪಾಲರ ಸಭೆ – ಬೆಂಗಳೂರು








ಜುಲೈ 17, ರಂದು ಪ್ರಾಚಾರ್ಯರಾದ ಶ್ರೀಮತಿ ರಾಧಿಕಾ ಗೋಸ್ವಾಮಿ ಅವರು ಜಿ.ಎನ್ ಟಾಟಾ ಸಭಾಂಗಣದಲ್ಲಿ ನಡೆದ ಸಿಬಿಎಸ್ಇ ಪ್ರಿನ್ಸಿಪಾಲ್ಸ್ ಸಭೆಯಲ್ಲಿ ಭಾಗವಹಿಸಿದರು, ಶ್ರೀ ರಾಹುಲ್ ಸಿಂಗ್, ಐಎಎಸ್, ಸಿಬಿಎಸ್‌ಸಿ ಅಧ್ಯಕ್ಷರು ಮತ್ತು ಶ್ರೀ ಹಿಮಾಂಶು ಗುಪ್ತಾ, ಐಎಎಸ್, ಸಿಬಿಎಸ್ಇ, ಕಾರ್ಯದರ್ಶಿಗಳು, ಸಭೆಯನ್ನು ಉದ್ದೇಶಿಸಿ ಮಾತನಾಡಿದರು, ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಅಡಿಯಲ್ಲಿ ಅಕಾಡೆಮಿಕ್ಸ್, ಅಸೆಸ್ಮೆಂಟ್ ಮೌಲ್ಯಮಾಪನ, ತರಬೇತಿ ಮತ್ತು ಶಾಲಾ ಆಡಳಿತ ಕುರಿತಂತೆ ಮಹತ್ವದ ವಿಚಾರಗಳು ಚರ್ಚಿಸಲ್ಪಟ್ಟವು.

## ಟೆಕ್ವಾಂಡೋದಲ್ಲಿ ಚಿನ್ನದ ಪದಕದ ಗೌರವ











ನಮ್ಮ ಶಾಲೆಯ 4ನೇ ತರಗತಿಯ 'ಎ' ವಿಭಾಗದ ವಿದ್ಯಾರ್ಥಿನಿಯಾದ ಖ್ಯಾತಿ ಕೆ.ಜೈನ್ ಅವರು 2025 ರ ಟೆಕ್ವಾಂಡೋ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕನ್ನು ಗೆದ್ದು ಶಾಲೆಗೆ ಕೀರ್ತಿ ತಂದಿದ್ದಾರೆ, ಅವರು ಕ್ಯೂರುಗಿ- ಉಪ ಕಿರಿಯ ಹುಡುಗಿಯರ ವಿಭಾಗದಲ್ಲಿ ಪಾಲ್ಗೊಂಡು (20 ಕೆ.ಜಿ ಒಳಗಿನ) ಶಕ್ತಿಪ್ರದರ್ಶನ, ಚುರುಕುತನ ಮತ್ತು ಶಿಸ್ತನ್ನು ಪ್ರದರ್ಶಿಸಿದರು. ಈ ಸ್ಪರ್ಧೆ 2025ರ ಜುಲೈ 17 ರಿಂದ 22 ರವರೆಗೆ ಕೋರಮಂಗಲದ ಒಳಾಂಗಣ ಕ್ರೀಡಾಂಗಣ, ಬೆಂಗಳೂರಿನಲ್ಲಿ ನಡೆಯಿತು, ವಿವಿಧ ಶಾಲೆಗಳ ಪ್ರತಿಭಾವಂತ ಯುದ್ಧ ಕಲಾ ಕ್ರೀಡಾಪಟುಗಳು ಭಾಗವಹಿಸಿದ್ದರು, ಖ್ಯಾತಿ ಕೆ.ಜೈನ್ ಅವರಿಗೆ ಹಾರ್ದಿಕ ಅಭಿನಂದನೆಗಳು.

## ನಿಯತಕಾಲಿಕ ಪರೀಕ್ಷೆ ಜುಲೈ 2025

ನಮ್ಮ ಶಾಲೆಯಲ್ಲಿ ಜುಲೈ 19 ರಿಂದ 25ರ ವರೆಗೆ ಮೊದಲ ಅವಧಿ ಪರೀಕ್ಷೆ ಯಶಸ್ವಿಯಾಗಿ ನಡೆಯಿತು, ಪೂರ್ವ ಪ್ರಾಥಮಿಕ ಹಂತದಿಂದ ಹನ್ನೆರಡನೆಯ ತರಗತಿಯವರೆಗೂ ನಡೆಸಲಾಯಿತು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದರು, ಈ ಪರೀಕ್ಷೆಯ ಉದ್ದೇಶ ಪಠ್ಯಕ್ರಮದ ಅರ್ಥೈಸುವಿಕೆಯನ್ನು ಪರೀಕ್ಷಿಸುವುದು ಮತ್ತು ಸುಧಾರಣೆ ಅಗತ್ಯವಿರುವ ಕ್ಷೇತ್ರಗಳನ್ನು ಗುರುತಿಸುವುದಾಗಿತ್ತು, ಪೂರ್ವ ಪ್ರಾಥಮಿಕ ತರಗತಿಗಳಲ್ಲಿ ಮನರಂಜನಾತ್ಮಕ ಚಟುವಟಿಕೆಗಳ ಮೂಲಕ ಮೌಲ್ಯ ಮಾಪನ ಮಾಡಲಾಯಿತು ಮತ್ತು ಪೂರ್ವ ಪ್ರಾಥಮಿಕ ಹಂತದ ವಿದ್ಯಾರ್ಥಿಗಳಿಗೆ ಅಂಕ, ಭಾಷಾ ಜ್ಞಾನ ಮತ್ತು ಚಲನೆ-ಕೌಶಲ್ಯಗಳ ಪರೀಕ್ಷೆಯನ್ನು ವಿಕಾಸ ಹಂತಕ್ಕೆ ಅನುಗುಣವಾಗಿ ನಡೆಸಲಾಯಿತು.

## ಗಣಿತ ಶಿಕ್ಷಕರ ಕಾರ್ಯಾಗಾರ



ಜುಲೈ 19, ರಂದು ನಮ್ಮ ಶಾಲೆಯ ಗಣಿತ ಶಿಕ್ಷಕರಾದ ಶ್ರೀ ಮಂಜುನಾಥ್.ಟಿ ಮತ್ತು ಶ್ರೀಮತಿ ವರ್ಷಾ ವಿ.ಜಿ.ಎಸ್, ಅವರು ಬೆಂಗಳೂರು ಸಿಟಿ ಸಂಸ್ಥೆಯಲ್ಲಿ "ಹೌ ಮ್ಯಾಥ್ಸ್ ಇಸ್ ಇಂಟರೆಸ್ಟಿಂಗ್?" ಎಂಬ ವಿಷಯದ ಕುರಿತು ಕಾರ್ಯಾಗಾರದಲ್ಲಿ ಭಾಗವಹಿಸಿದರು, ಈ ಕಾರ್ಯಾಗಾರವನ್ನು ಶ್ರೀ ರಂಗಸ್ವಾಮಿ, ಶ್ರೀ ಬಾಲಸುಬ್ರಮಣ್ಯಂ ಮತ್ತು ಶ್ರೀ ಜಯಕುಮಾರ ಅವರಿಂದ ನಡೆಸಲಾಯಿತು, ಕಾರ್ಯಾಗಾರದಲ್ಲಿ ಶಿಕ್ಷಕರು ತರಗತಿಯಲ್ಲಿ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಗುಂಪು ಚರ್ಚೆ ನಡೆಸಿದರು, ಗಣಿತವನ್ನು ಆಕರ್ಷಕವಾಗಿಸಲು ಹಲವು ಕಲಿಕಾ ಪದ್ಧತಿಗಳನ್ನು ಹಂಚಿಕೊಳ್ಳಲಾಯಿತು, ಈ ಕಾರ್ಯಾಗಾರ ಪರಿಣಾಮಕಾರಿ ಬೋಧನೆಯಲ್ಲಿ ಸಹಾಯ ಮಾಡಿತು.

## ರಾಜ್ಯಸಭಾ ಹಿಂದಿ ಒಲಿಂಪಿಯಾಡ್ ಪರೀಕ್ಷೆ



ಜುಲೈ 25, ರಂದು ಪೋಲೀಸ್ ಪಬ್ಲಿಕ್ ಶಾಲೆಯಲ್ಲಿ ರಾಜ್ಯಸಭಾ ಹಿಂದಿ ಒಲಿಂಪಿಯಾಡ್ ಕುರಿತು ಪರೀಕ್ಷೆ ನಡೆಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ, ಹಿಂದಿ ಭಾಷೆಯ ಜ್ಞಾನ ಮತ್ತು ಅರಿವು ವೃದ್ಧಿಸುವ ಕುರಿತು ತಮಗೆ ಇರುವ ತಿಳುವಳಿಕೆಯನ್ನು ಪ್ರದರ್ಶಿಸಿದರು, ಈ ಪರೀಕ್ಷೆಯ ಉದ್ದೇಶ ಭಾಷಾ ಜ್ಞಾನ ಮತ್ತು ಜಾಗೃತಿಯನ್ನು ಉತ್ತೇಜಿಸುವುದಾಗಿತ್ತು ಮತ್ತು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಬ್ಯಾಗ್ ರಹಿತ ದಿನ













ಸಿಬಿಎಸ್ ಇ ಮಾರ್ಗದರ್ಶನದ ಅನ್ವಯ ಜುಲೈ 5, ರಂದು"ಬ್ಯಾಗ್ ರಹಿತ ದಿನ" ವನ್ನು "ಭಾರತೀಯ ಸಂಸ್ಕೃತಿ" ಎಂಬ ವಿಷಯದೊಂದಿಗೆ ಪೂರ್ವ ಪ್ರಾಥಮಿಕ ದಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು. ಚಿತ್ರಕಲೆ, ಕಥೆ ಹೇಳಿಕೆ, ಪಾತ್ರ ನಿರ್ವಹಣೆ, ರಸಪ್ರಶ್ನೆ, ರಂಗೋಲಿ, ಮ್ಯೂರಲ್ ಆರ್ಟ್, ಮನರಂಜನಾ ಆಟಗಳು, ಒಳಾಂಗಣ ಮತ್ತು ಹೊರಾಂಗಣ ಚಟುವಟಿಕೆಗಳು ಸೇರಿದಂತೆ ಹಲವು ವಿಷಯಾಧಾರಿತ ಚಟುವಟಿಕೆಗಳು ನಡೆಯಿತು, ನೀರು ವರ್ಗಾವಣೆ, ಪ್ಲೇ ಡೋ, ಮ್ಯೂಸಿಕಲ್ ಚೇರ್ಸ್, ಓಟಗಳು ಇತ್ಯಾದಿ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಭಾರತದ ಸಮೃದ್ಧ ಸಂಸ್ಕೃತಿಯನ್ನು ಆನಂದದಾಯಕ ಹಾಗೂ ಸಂವಾಹನಾತ್ಮಕ ರೀತಿಯಲ್ಲಿ ಅನ್ವೇಷಿಸಲು ಅವಕಾಶ ಕಲ್ಪಿಸಲಾಯಿತು, ಭವಿಷ್ಯದಲ್ಲಿಯೂ ಇಂತಹ ಕಾರ್ಯಕ್ರಮಗಳು ಮಕ್ಕಳನ್ನು 'ಚೌಕಟ್ಟಿನಾಚೆಗೆ ಯೋಚಿಸಲು" ಪ್ರೇರೇಪಿಸಿ, ಕೌಶಲ್ಯ ಆಧಾರಿತ ಸಂತೋಷಭರಿತ ಕಲಿಕೆಯನ್ನು ಒತ್ತಿ ಹೇಳಿ, ಒತ್ತಡರಹಿತ ಅಧ್ಯಯನವನ್ನು ಉತ್ತೇಜಿಸಿತು.














ಜುಲೈ 26, ರಂದು 1 ರಿಂದ 8ನೇ ತರಗತಿ ವರೆಗೆ ಬ್ಯಾಗ್ ರಹಿತ ದಿನದ ಚಟುವಟಿಕೆ (ಕಲಾ ಸಂಯೋಜಿತ ಅಧ್ಯಯನ) ನಡೆಯಿತು. ಈ ಚಟುವಟಿಕೆಯು ಸೃಜನಶೀಲತೆ, ಸಾಂಸ್ಕೃತಿಕ ಅರಿವು ಮತ್ತು ಅನುಭವಾಧಾರಿತ ಕಲಿಕೆಯನ್ನು ಉತ್ತೇಜಿಸುವ ಉದ್ದೇಶ ಹೊಂದಿತ್ತು, ವಿದ್ಯಾರ್ಥಿಗಳು ವಿಭಿನ್ನ ಶೈಲಿಯ ಸೃಜನಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸಿದರು – ಮುಖವಾಡ ನಿರ್ಮಾಣ, ನೃತ್ಯ, ನಾಟಕ, ನಕ್ಷೆ ಚಿತ್ರಣ, ಚಿತ್ರಕಲಾ ರೂಪಿಸುವುದು, ಹಬ್ಬಗಳ ಪರಿಚಯ, ಕರ್ನಾಟಕ ಮತ್ತು ಲಡಾಖ್ ಸಂಸ್ಕೃತಿಗಳ ಅಂಶಗಳನ್ನು ಒಳಗೊಂಡ ಕಲಾ-ಸಾಹಿತ್ಯಾತ್ಮಕ ಪ್ರಸ್ತುತಿ, ಈ ಚಟುವಟಿಕೆಯಿಂದ ವಿದ್ಯಾರ್ಥಿಗಳು ವಿಷಯಗಳ ಜ್ಞಾನವನ್ನು ಮಾತ್ರವಲ್ಲದೆ ತಂಡದ ಕೆಲಸ, ಕಲಾತ್ಮಕ ಪ್ರಜ್ಞೆ ಮತ್ತು ಅಭಿವ್ಯಕ್ತಿ ಕೌಶಲ್ಯಗಳನ್ನು ವ್ಯಕ್ತಪಡಿಸಿದರು.


















ಎಲ್ಲಾ ತರಗತಿಗಳಲ್ಲಿಯೂ ಸಾಮಾನ್ಯವಾಗಿ ಕರ್ನಾಟಕ ಮತ್ತು ಲಡಾಖ್ ನಡುವಿನ ಸಾಂಸ್ಕೃತಿಕ ಸಂಬಂಧವಿರುವ ವಿಷಯಗಳಾದ ಹಬ್ಬಗಳು, ಆಹಾರ ಪದ್ಧತಿ, ವಸ್ತು, ಸ್ಮಾರಕಗಳು, ಉಡುಪು, ವನ್ಯಜೀವಿ ಕಟ್ಟಡಗಳು ಸಾಂಪ್ರದಾಯಕ ಕಲಾ ರೂಪಗಳ ಬಗ್ಗೆ ಮಾಡಿದ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ತಿಳಿಸಿದರು, ಮತ್ತು ಆನಂದದಾಯಕ ಅನುಭವಾತ್ಮಕ ಕಲಿಕೆಯ ಚೈತನ್ಯಮಯ ಸ್ಥಳವನ್ನಾಗಿ ಪರಿವರ್ತಿಸಿದರು.

## “ರೀಡ್ ಆಂಡ್ ಲೀಡ್” ಓದುವ ಸ್ಪರ್ಧೆ









ಜುಲೈ 26, ರಂದು ಕೋರಮಂಗಲದ ಸೇಂಟ್ ಫ್ರಾನ್ಸಿಸ್ ಹೈಸ್ಕೂಲ್‌ನಲ್ಲಿ ನಡೆದ ಅಂತರ ಶಾಲಾ ಓದುವ ಸ್ಪರ್ಧೆಯಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು, ಕಿರಿಯ ವಿಭಾಗದಲ್ಲಿ 1ನೇ ತರಗತಿಯ ಬಿ ವಿಭಾಗದ ನೊಮನ್ ಸೋನಾರ್ ಮತ್ತು 2ನೇ ತರಗತಿಯ ಎಫ್ ವಿಭಾಗದ ಪೂನರ್ವಿ.ಟಿ, ಹಾಗೂ 3ನೇ ತರಗತಿಯ ಡಿ ವಿಭಾಗದ ತಬಸೂಂ ನಾಜ್, ಮತ್ತು 4ನೇ ತರಗತಿಯ ಇ ವಿಭಾಗದ ಉತ್ತವಿ.ಎನ್ ಅವರು ಹಿರಿಯ ವಿಭಾಗದಲ್ಲಿ ನಮ್ಮ ಶಾಲೆಯನ್ನು ಪ್ರತಿನಿಧಿಸಿದ್ದರು.

ಸ್ಪರ್ಧೆಯಲ್ಲಿ ಪುನರ್ವಿ.ಟಿ ಅವರು ಕಿರಿಯ ವಿಭಾಗದಲ್ಲಿ 3ನೇ ಸ್ಥಾನ ಪಡೆದು ನಮ್ಮ ಶಾಲೆಗೆ ಕೀರ್ತಿ ತಂದಿದ್ದಾರೆ, ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.

## ಹಳದಿ ಬಣ್ಣದ ದಿನದ ಆಚರಣೆ



















ಜುಲೈ 26, ರಂದು ಪೂರ್ವ ಪ್ರಾಥಮಿಕ ವಿಭಾಗದಲ್ಲಿ ಹಳದಿ ದಿನವನ್ನು ಬಹಳ ಉತ್ಸಾಹದಿಂದ ಆಚರಿಸಲಾಯಿತು, ಶಾಲೆಯ ಕೊಠಡಿಗಳನ್ನು ಸಂಪೂರ್ಣವಾಗಿ ಹಳದಿ ಬಲೂನುಗಳು, ಸೂರ್ಯಕಾಂತಿ ಹೂವುಗಳಿಂದ, ಅಲಂಕರಿಸಲಾಗಿತ್ತು, ಮಕ್ಕಳು ಮತ್ತು ಶಿಕ್ಷಕರು ಹಳದಿ ಬಣ್ಣದ ಬಟ್ಟೆಗಳನ್ನು ಧರಿಸಿ ಶಾಲೆಗೆ ಬಂದರು, ವಿದ್ಯಾರ್ಥಿಗಳು ಹಳದಿ ಬಣ್ಣದ ಹೂವುಗಳನ್ನು, ಹಣ್ಣುಗಳನ್ನು ವಿವಿಧ ವಸ್ತುಗಳನ್ನು ತಂದು ಪ್ರದರ್ಶಿಸಿದರು, ಶಿಕ್ಷಕರು ಹಳದಿ ಬಣ್ಣದ ಮಹತ್ವವನ್ನು ವಿವರಿಸಿದರು, ಮಕ್ಕಳು ಹಳದಿ ಬಣ್ಣದ ಕುರಿತು ಕವಿತೆಗಳನ್ನು ಹಾಡುಗಳನ್ನು ಹಾಗೂ ಚಿತ್ರವನ್ನು ಬಿಡಿಸಿದರು.

ಹಳದಿ ಬಣ್ಣದ ದಿನಾಚರಣೆಯು ಸ್ವಾಗತ ಭಾಷಣದಿಂದ ಪ್ರಾರಂಭವಾಗಿ ನೃತ್ಯ ಪ್ರದರ್ಶನ ಹಳದಿ ಬಣ್ಣದ ಮಹತ್ವ ವಿವರಿಸುವ ಭಾಷಣಗಳಿಂದ ಆಯೋಜನೆಗೊಂಡಿತ್ತು, ತರಗತಿಗಳಲ್ಲಿ ಅನಾನಸ್ ಹಣ್ಣಿನ ಕೈ ಚಟುವಟಿಕೆಗಳು, ಎಲೆಗಳಿಗೆ ಬಣ್ಣ ಹಚ್ಚುವುದು, ಬಾತು ಕೋಳಿ ಚೌಕಟ್ಟುಗಳು ಮುಂತಾದ ಆಕರ್ಷಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

## 🏆 ನೋಬಲ್ ಹಂಟ್ ಸ್ಪರ್ಧೆಗಳು-2025







ಶಾಲೆಯಲ್ಲಿ ಜುಲೈ 28, ರಂದು ಎಲ್ಲಾ ತರಗತಿಗಳಲ್ಲೂ ನೋಬೆಲ್ ಹಂಟ್ ಸ್ಪರ್ಧೆಗಳು ನಡೆದವು, ಪೂರ್ವ ಪ್ರಾಥಮಿಕ ದಿಂದ 12ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಚಿತ್ರಕಲೆ, ಪ್ರಬಂಧ ಬರಹ, ಕವನ ರಚನೆ ಹಾಗೂ ಕಥೆ ಬರಹ ಮುಂತಾದ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಕಾರ್ಗಿಲ್ ವಿಜಯೋತ್ಸವ ದಿನ ಆಚರಣೆ





"ಕಾರ್ಗಿಲ್ ವಿಜಯ ದಿವಸವನ್ನು" ಜುಲೈ 30 ರಂದು ಅಪಾರ ದೇಶಾಭಿಮಾನ ಮತ್ತು ಗೌರವದಿಂದ ಆಚರಿಸಲಾಯಿತು. ಹೃದಯ ಸ್ಪರ್ಶಿ ಗೌರವ ಸೂಚನೆ ಕಾರ್ಯಕ್ರಮವನ್ನು ರಾಷ್ಟ್ರಕೂಟ ಹೌಸ್‌ನ ವಿದ್ಯಾರ್ಥಿಗಳು ಆಯೋಜಿಸಿದರು. ಈ ಕಾರ್ಯಕ್ರಮವು ಎಲ್ಲರ ಮನಸ್ಸಿನಲ್ಲಿ ಭಾವನಾತ್ಮಕ ಸ್ಪಂದನವನ್ನು ಉಂಟುಮಾಡಿ, ದೇಶದ ಮೇಲೆ ಹೆಮ್ಮೆಪಡುವ ಭಾವನೆಯನ್ನು ಹುಟ್ಟುಹಾಕಿತು.ಈ ಕಾರ್ಯಕ್ರಮದಲ್ಲಿ ಆತ್ಮೀಯ ನೃತ್ಯ ಪ್ರದರ್ಶನವೊಂದು ನಡೆಯಿತು, ಇದು ಯೋಧನ ಪಯಣವನ್ನು – ಸಾಹಸಮಯ ಹೋರಾಟದಿಂದ ಅಂತಿಮ ತ್ಯಾಗದವರೆಗೆ – ಹಾಗೂ ಅವರು ಬಿಟ್ಟುಹೋದ ಶ್ರೇಷ್ಠ ಪರಂಪರೆಯನ್ನು ಪ್ರತಿಬಿಂಬಿಸಿತು. ವಿದ್ಯಾರ್ಥಿಗಳು ಪ್ರಭಾವಶೀಲ ಲೇಖನಗಳು ಮತ್ತು ಭಾಷಣಗಳನ್ನು ವಾಚಿಸಿದರು, ಅದು ಕಾರ್ಗಿಲ್ ಯುದ್ಧದ ತಂತ್ರಜ್ಞಾನದ ಮಹತ್ವ, ಯುದ್ಧದ ಕಠಿಣ ಪರಿಸ್ಥಿತಿಗಳು, ನಮ್ಮ ಯೋಧರ ಧೈರ್ಯ ಮತ್ತು ಹಿಮ್ಮಟ್ಟದ ಭಾರತೀಯ ಸೇನೆಯ ಸ್ಪೂರ್ತಿದಾಯಕ ಮನೋಭಾವನೆ ಕುರಿತಂತೆ ಬೆಳಕು ಚೆಲ್ಲಿತು.ಈ ಶ್ರದ್ಧಾಂಜಲಿ ಕಾರ್ಯಕ್ರಮವು ನಮ್ಮ ಯೋಧರ ತ್ಯಾಗವನ್ನು ಸ್ಮರಿಸುವ ಒಂದು ಅವಕಾಶವಾಗಿತ್ತು, ಜೊತೆಗೆ ಇಂದಿನ ಯುವ ಪೀಳಿಗೆಗೆ ಈ ತ್ಯಾಗದ ಮಹತ್ವವನ್ನು ತಿಳಿಯಲು ಅವಕಾಶ ನೀಡಿತು. ಈ ಕಾರ್ಯಕ್ರಮದ ಅಂತಿಮ ಘಟ್ಟದಲ್ಲಿ, ಶಾಲೆಯ ಎಲ್ಲಾ ಸದಸ್ಯರೂ ಕೃತಜ್ಞತೆಯಿಂದ ನಿಂತು, ದೇಶಭಕ್ತಿಯ ಗುಣವನ್ನು ಮೆರೆದರು ಮತ್ತು ಯೋಧರ ಧೈರ್ಯವಂತಿಕೆಯ ಪರಂಪರೆಯನ್ನು ಮುಂದುವರೆಸುವುದಾಗಿ ಸಂಕಲ್ಪ ಮಾಡಿದರು.

## ವಿಶ್ವ ಪ್ರಕೃತಿ ಸಂರಕ್ಷಣಾ ದಿನ







ಜುಲೈ 31ರಂದು, ಪಿಪಿಎಸ್ ಶಾಲೆಯಲ್ಲಿ ಪ್ರಕೃತಿ ಸಂರಕ್ಷಣಾ ದಿನವನ್ನು ಉತ್ಸಾಹಭರಿತವಾಗಿ ಹಾಗೂ ಪರಿಸರ ಸಂರಕ್ಷಣೆಯ ಮಹತ್ವವನ್ನು ಮಕ್ಕಳಲ್ಲಿ ಬೆಳಸುವ ಉದ್ದೇಶದಿದಂದ ಆಯೋಜಿಸಲಾಯಿತು, ಈ ದಿನವು ನೈಸರ್ಗಿಕ ಸಂಪತ್ತನ್ನು ಉಳಿಸಿಕೊಳ್ಳಬೇಕೆಂಬ ತುರ್ತು ಅಗತ್ಯತೆಯನ್ನು ನಮಗೆ ನೆನಪಿಸುತ್ತಿತ್ತು.

ಹೊಯ್ಸಳ ಹೌಸ್‌ನ ವಿದ್ಯಾರ್ಥಿಗಳು ಪ್ರಕೃತಿ ಸಂರಕ್ಷಣಾ ಕುರಿತಾದ ಹಾಡುಗಳು, ನೃತ್ಯಗಳು ಒಂದು ನಾಟಕವನ್ನು ಪ್ರದರ್ಶಿಸಿದರು. ಅವರ ಪ್ರದರ್ಶನವು ಮಾನವ ನಿರ್ಲಕ್ಷ್ಯದ ಪರಿಣಾಮಗಳನ್ನು ಹಾಗೂ ಪ್ರಕೃತಿ ಮತ್ತು ಅಭಿವೃದ್ಧಿಯ ನಡುವಿನ ಸೂಕ್ಷ್ಮ ಸಮತೋಲನವನ್ನು ಅರ್ಥಪೂರ್ಣವಾಗಿ ತೋರಿಸಿತು. ಶಕ್ತಿಯುತ ಸಂವಾದಗಳು ಹಾಗೂ ನಾಟಕದ ಮೂಲಕ, ಪರಿಸರ ಜಾಗೃತಿ, ಸಂರಕ್ಷಣೆ ಮತ್ತು ದೈನಂದಿನ ಜೀವನದಲ್ಲಿ ಪರಿಸರ ಸ್ನೇಹಿ ಕ್ರಮಗಳನ್ನು ಅಳವಡಿಸುವ ಅಗತ್ಯತೆಗಳೆಂಬ ಸಂದೇಶವನ್ನು ನೀಡಿ ನಾಟಕ ಪ್ರಭಾವ ಬೀರುವಂತೆ ಮಾಡಿತು. ಈ ಕಾರ್ಯಕ್ರಮವು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ತಮ್ಮ ನಿತ್ಯಚಟುವಟಿಕೆಗಳನ್ನು ಪುನರ್ ಪರಿಶೀಲನೆ ಮಾಡಿಸುವಂತಾಗಿದ್ದು, ಪ್ಲಾಸ್ಟಿಕ್ ಬಳಕೆಯ ಕಡಿತ, ಸಸಿಗಳನ್ನು ನೆಡುವುದು, ನೀರನ್ನು ಸಂರಕ್ಷಿಸುವುದು ಮತ್ತು ಮರುಬಳಕೆಗೆ ಉತ್ತೇಜನ ನೀಡುವುದು ಇತ್ಯಾದಿ ಸಣ್ಣ ಬದಲಾವಣೆಗಳಿಂದ ದೊಡ್ಡ ಪರಿಣಾಮ ಉಂಟಾಗಬಹುದು ಎಂಬ ನಂಬಿಕೆಯನ್ನು ಗಟ್ಟಿಗೊಳಿಸಿತು. ಕಾರ್ಯಕ್ರಮದ ಅಂತ್ಯದಲ್ಲಿ ಪ್ರಕೃತಿಯನ್ನು ರಕ್ಷಿಸುವುದು ನಮ್ಮೆಲ್ಲರ ಹೊಣೆ ಎಂಬ ಸಂದೇಶವನ್ನು ಸಾರಿದರು.